MVC No. 1727/2024

PW-1

**(ಇಂದು ದಿಃ 16-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ಶ್ರೀ. NSP ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

- ಮಳಖೇಡ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 42/2024 ರಲ್ಲಿನ FIR ನ ನಕಲನ್ನು ನಿಪಿ-1 ಎಂದು,
- ಹೇಳಿಕೆ ದೂರನ್ನು ನಿಪಿ-2 ಎಂದು,
- ಅಂತಿಮ ವರದಿಯನ್ನು ನಿಪಿ-3 ಎಂದು,
- ಶವಾತನಿಖಾ ವರದಿಯನ್ನು ನಿಪಿ-4 ಎಂದು,
- ಪಂಚನಾಮೆಯನ್ನು ನಿಪಿ-5 ಎಂದು,
- ಮೋಟಾರ ವಾಹನ ಅಪಘಾತ ವರದಿಯನ್ನು ನಿಪಿ-6 ಎಂದು,
- ಶವಾ ಪರೀಕ್ಷಾ ವರದಿಯನ್ನು ನಿಪಿ-7 ಎಂದು,
- ಡಿಎಲ್ ನ ನಕಲನ್ನು ನಿಪಿ-8 ಎಂದು,
- RC ಪುಸ್ತಕದ ನಕಲನ್ನು ನಿಪಿ-9 ಎಂದು,

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ಶ್ರೀ.TVP ವಕೀಲರಿಂದಃ-**

ಅಪಘಾತ ಆದಾಗ ನಾನು ಇರಲಿಲ್ಲ, ನನ್ನ ಮಗಳು ಇದ್ದಳು. ಅಪಘಾತದ ಬಗ್ಗೆ ಪೊಲೀಸರಿಗೆ ನನ್ನ ಮಗಳು ಪ್ರೀಯಾಂಕ ಮಾಹಿತಿ ನೀಡಿದ್ದಾರೆ. ನನ್ನ ಮಗ ಅನೀಲಕುಮಾರು ನನ್ನ ಮಗಳು ಪ್ರೀಯಾಂಕ, ಚಿತ್ತಾಪುರದಿಂದ ಕೋಡ್ಲಾಗೆ ಆಟೋದಲ್ಲಿ ಹೋಗುತ್ತಿರುವಾಗ ಎದರುಗಡೆಯಿಂದ ಬಂದ ಮೋಟಾರ ಸೈಕಲ ಆಟೋಗೆ ಡಿಕ್ಕಿ ಹೋಡೆದು ಅಪಘಾತ ಆಗಿದೆ. ಪ್ರಿಯಾಂಕ ತನ್ನ ದೂರಿನಲ್ಲಿ ತಾನು, ಬಸಮ್ಮ ಮತ್ತು ಶಿಲ್ಪಾ ಮತ್ತು ಅನೀಲಕುಮಾರ 4 ಜನ ಆಟೋದಲ್ಲಿ ಹೋಗುತ್ತಿರುವಾಗ ಬಸಮ್ಮ , ಶಿಲ್ಪಾ ಮತ್ತು ಪ್ರೀಯಾಂಕ ಆಟೋ ಹಿಂಬದಿ ಶೀಟಿನಲ್ಲಿ ಕುಳಿತುಕೊಂಡಿದ್ದು ಅನೀಲಕುಮಾರು ಆಟೋ ಚಾಲಕನ ಪಕ್ಕ ಕುಳಿತುಕೊಂಡಿದ್ದರು

ಎಂದು ಉಲ್ಲೇಖ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆಟೋ ಸೇಡಂಗೆ ಸೇರಿದ್ದು ಎಂದರೆ ಸರಿ. ಸದರಿ ಆಟೋ ಗೆ ಸೇಡಂ ಪಟ್ಟಣದ 8 ಕೀಮೀ ವ್ಯಾಪ್ತಿಯಲಪ್ಳೆಲ್ಕಿ ಮಾತ್ರ ಸಂಚಾರ ಮಾಡುವ ಪರ್ಮಿಟ್ ಇತ್ತು ಎಂದರೆ ನನಗೆ ಗೊತ್ತಿಲ್ಲ, ಸೇಡನಿಂದ 15 ಕಿ. ಮೀ. ಆಚೆ ಅಪಘಾತ ಆಗಿದೆ ಎಂದರೆ ಸರಿ. ಆಟೋ ದಲ್ಲಿ ಹೋಗುತ್ತಿರುವಾಗ ಆಟೋ ಚಾಲಕ ಮುಂದೆಹೊಗುತ್ತಿದ್ದ ಲಾರಿ ಯನ್ನು ಒವರಟೇಕ್ ಮಾಡಲು ಹೋದಾಗ ಎದರುಗಡೆಯಿಂದ ಮೋಟರ್( ಸೈಕಲ್ ಬಂದು ಮುಖಾಮುಖಿ ಡಿಕ್ಕಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ, ಮೋಟರ್ ಸೈಕಲ್ ಸವಾರ ಅತೀ ವೇಗ ಮತ್ತು ನಿರ್ಲಕ್ಷತನದಿಂದ  ಮೇಟರ್ ಸೈಕಲನ್ನು ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿದ್ದು ಆತನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ,

ಅನೀಲಕುಮಾರನ ಮದುವೆ ಆಗಿರಲಿಲ್ಲ, ಅನೀಲಕುಮಾರ ತೀರಿ ಹೋದಾಗ ಆತನಿಗೆ 24 ವರ್ಷ ವಯಸ್ಸು ಆಗಿತ್ತು ಮತ್ತು ಆತ ಕೂಲಿ ಮಾಡಿ ತಿಂಗಳಿಗೆ 25,000/- ಸಂಪಾಧನೆ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಮಗ ನೀರ್ದೋಗಿ ಆಗಿದ್ದ ಎಂದರೆ ಸರಿಯಲ್ಲ, ಅಪಘಾತ ಆಟೋ ಮತ್ತು ಮೋಟರ್ ಸೈಕಲ ಇಬ್ಬರ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,  ಮೋಟರ್ ಸೈಕಲ ಸವಾರನ ತಪ್ಪಿನಿಂದ ಮಾತ್ರ ಅಪಘಾತ ಆಗಿದೆ ಎಂದೆರ ಸರಿಯಲ್ಲ, ಅಪಘಾತದ ನಂತರ ನಾವೆಲ್ಲ ಅನೀಲಕುಮಾರನ ಜೋತೆ ಆಸ್ಪತ್ರೆಯಲ್ಲಿ ಇದ್ದ ಕಾರಣ ದೂರು ನೀಡಲು ಒಂದು ದಿನ ವಿಳಂಬ ಆಗಿದೆ. ನಾನು ಹೆಚ್ಚಿ ನ ಪರಿಹಾರ ಕೇಳಿದ್ದೇನೆ ಎಂದರೆ ಸರಿಯಲ್ಲ, ನನ್ನ ಮಗ ಆಟೋ ಚಾಲಕನ ಪಕ್ಕದಲ್ಲಿ ಕುಳಿತಿದ್ದ ಮತ್ತು ಆಟೋಗೆ ಪರ್ಮಿಟ್ ಇರಲ್ಲಲ್ಲ ಕಾರಣ ಪರಿಹಾರ ನೀಡಲು 2ನೇ ಎದರುದಾರರು ಜವಾಬ್ದಾರರು ಅಲ್ಲ ಎಂದರೆ ಸರಿಯಲ್ಲ, ಮೋಟರ್ ಸೈಕಲಗೆ ವಿಮೆ ಮತ್ತು ಸವಾರನಿಗೆ ಡಿಎಲ್ ಇದ್ದ ಬಗ್ಗೆ ನನಗೆ ಗೊತ್ತಿಲ್ಲ, ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**(3ನೇ ಎದುರುದಾರರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**

MVC No. 1727/2024

PW-1